CW.5 PW.6

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

CC No.131/2007

| | |
|---|---|
| ಸಾಕ್ಷಿದಾರರ ಹೆಸರು | ನಾಗರಾಜ ಆರ್ |
| ತಂದೆಯ ಹೆಸರು | ಲೇಟ್ ರಾಜಶೇಖರಯ್ಯ ಸಿ |
| ವಯಸ್ಸು | 49 ವರ್ಷ |
| ವೃತ್ತಿ | Deputy conservator forest |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 14.11.2024 |

<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>

ನಾನು ಶ್ರೀಮಂಗಳ ವನ್ಯಜೀವಿ ವಿಭಾಗದಲ್ಲಿ ಆಗ ಕೆಲಸ ಮಾಡುತ್ತಿದ್ದೆ. ಆಗ ಯುವಿ ಸಿಂಗ್ ರವರ ನೇತೃತ್ವದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ವಿಚಾರಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ ಎಂದು ತಂಡಗಳನ್ನು ನೇಮಿಸಿದ್ದರು ನನ್ನನ್ನು ಆ ತಂಡದ ಪೈಕಿ ಒಂದು ತಂಡದಲ್ಲಿ ನೇಮಕ ಮಾಡಿದ್ದರು. ಅದರಂತೆ ಆ ತಂಡದಲ್ಲಿ ನನ್ನೊಂದಿಗೆ ರೆವಿನ್ಯೂ ಸರ್ವೆಯರ್, ಅರಣ್ಯ ಇಲಾಖೆಗೆ ಸಂಬಂಧಿಸಿದ ಸರ್ವೆಯರ್ ಮತ್ತು ಡೆಪ್ಯೂಟಿ ರೇಂಜ್ ಆಫೀಸರ್, ಮೈನಿಂಗ್ ಇಲಾಖೆಯ ಜೆಇ ರವರು ಇದ್ದರು. ನಾವುಗಳು ದಿಃ28.04.2006 ರಂದು ಬಿಜ್ಜಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.27 ಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ, ಸರ್ವೆ ಮಾಡಿ ಅಳತೆ ಮಾಡಿ ಅಲ್ಲಿ 7 ಎಕರೆ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ಆಗಿದೆ ಎಂಬ ಬಗ್ಗೆ ವರದಿ ತಯಾರಿಸಿ ಅದಕ್ಕೆ ಸಹಿ ಮಾಡಿ ಸಲ್ಲಿಸಿರುತ್ತೇವೆ. ನಾವು ಸಲ್ಲಿಸಿದ ಸ್ಕೆಚ್ ವರದಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಕಡತದಲ್ಲಿರುವ ಸ್ಕೆಚ್ ವರದಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ

ಸ್ಕೆಚ್ ನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ಸ್ದಳ ಪರಿಶೀಲನೆ ಮಾಡಿ ಅಳತೆ ಮಾಡುವುದಕ್ಕೂ ಮೊದಲು ಆ ಜಮೀನಿಗೆ ಸಂಬಂಧಿಸಿದಂತೆ ಇರುವ ಯಾವುದೇ ದಾಖಲೆಯನ್ನು ನಾನು ಪಡೆದುಕೊಂಡಿಲ್ಲ ಸಾಕ್ಷಿ ಮುಂದುವರಿದು ಆದರೆ ಸಂಬಂಧಪಟ್ಟ ವಲಯದ ಸಿಬ್ಬಂದಿ ಸಹ ನಮ್ಮೊಂದಿಗೆ ಇದ್ದರು ಎಂದು ನುಡಿಯುತ್ತಾರೆ. ಸರ್ವೆ ನಂ.27 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ನನಗೆ ಈಗ ನೆನಪಿಲ್ಲ. ಸರ್ವೆ ನಂ.27 ರಲ್ಲಿ ರೆವಿನ್ಯೂ ಜಮೀನು ಎಷ್ಟು ಅರಣ್ಯ ಇಲಾಖೆಗೆ ಸಂಬಂಧಿಸಿದ ಜಮೀನು ಎಷ್ಟು ಇತ್ತು ಎಂದು ನಿಮಗೆ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ರೆವಿನ್ಯೂ ಜಮೀನು ಇಲ್ಲ ಅದೆಲ್ಲಾ ಅರಣ್ಯ ಇಲಾಖೆಗೆ ಸಂಬಂಧಿಸಿದ ಜಮೀನು ಎಂದು ನುಡಿಯುತ್ತಾರೆ. ಸರ್ವೆ ನಂ.27 ರಲ್ಲಿ ಒಟ್ಟು 1,116 ಎಕರೆ ಜಮೀನು ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

ನಾವು ಸ್ದಳ ಪರಿಶೀಲನೆ ಮಾಡಿದಾಗ ಅಕ್ರಮವಾಗಿ ಗಣಿಗಾರಿಕೆ ಮಾಡಿರುವ ಬಗ್ಗೆ ಅಲ್ಲಿ ನಮಗೆ ಕಂಡು ಬಂದಿರುತ್ತದೆ. ಆ ಸ್ದಳದಲ್ಲಿ ಯಾರು ಅಕ್ರಮವಾಗಿ ಗಣಿಗಾರಿಕೆ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಸರ್ವೆ ಮಾಡಿದಾಗ ಅಕ್ರಮ ಗಣಿಗಾರಿಕೆಯ ಬಗ್ಗೆ ಗೊತ್ತಾಗಿರುತ್ತದೆ. ಅಕ್ರಮವಾಗಿ ಅಲ್ಲಿ ಗಣಿಗಾರಿಕೆ ಆಗಿದೆ ಎಂದು ನೀವು ಹೇಗೆ ಹೇಳುತ್ತೀರಾ ಎಂದರೆ ಸಾಕ್ಷಿಯು ಅದು ಅರಣ್ಯ ಇಲಾಖೆಯ ಜಮೀನು ಸರ್ವೆ ಸಮಯದಲ್ಲಿ ಅಕ್ರಮ ಗಣಿಗಾರಿಕೆ ಆದ ಬಗ್ಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಅಕ್ರಮ ಗಣಿಗಾರಿಕೆ ಎಂದು ಹೇಳಿರುವ ಜಾಗಕ್ಕೆ ಸಂಬಂಧಿಸಿದಂತೆ ಯಾರಿಗಾದರೂ ಆ ಮೊದಲಿಗೆ ಅಲ್ಲಿ ಗಣಿಗಾರಿಕೆ ಮಾಡಲು ಸರ್ಕಾರದಿಂದ ಪರವಾನಿಗೆ ಕೊಟ್ಟಿದ್ರ ಎಂಬ ಬಗ್ಗೆ ನೀವು ತಿಳಿದುಕೊಂಡಿದ್ರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಭೂ ಇಲಾಖೆಯ ಅಧಿಕಾರಿಗಳಿಗೆ ಆ ಸ್ದಳದಲ್ಲಿ ಗಣಿಗಾರಿಕೆ ಮಾಡಲು ಯಾರಿಗಾದರೂ ಪರವಾನಿಗೆ ಕೊಟ್ಟಿದ್ರ ಎಂಬ ಬಗ್ಗೆ ನಾನು ವಿಚಾರಿಸಲಿಲ್ಲ. ದಿಃ11.04.2003 ರಂದು ನಮ್ಮ

CW.5   PW.6

ಇಲಾಖೆಯವರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ ಸರ್ವೆ ನಂ.27 ರಲ್ಲಿ ಅನಧಿಕೃತವಾಗಿ ಗಣಿಗಾರಿಕೆ ಆಗಿರುವ 7 ಎಕರೆ ಜಮೀನು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸ್ಥಳಕ್ಕೆ ಭೇಟಿ ನೀಡುವ ಮೊದಲು ಆ ಸ್ಥಳಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಪಡೆದುಕೊಳ್ಳದೇ ಕೇವಲ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ನಾಮಕವಸ್ತೆಗೆ ಮಾತ್ರ ಸ್ಥಳ ಪರಿಶೀಲನೆ ಮಾಡಿ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆದಿಲ್ಲ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಸರ್ಕಾರದ ಪರವಾನಿಗೆಯ ಮೇರೆಗೆಯೇ ಗಣಿಗಾರಿಕೆ ನಡೆದಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಓ ಹೇ ಕೇ ಸರಿ ಇದೆ

(ರಾಧಾ ಎಸ್.)
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ.